**<u>ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.</u>**

**<u>ಎಸ್ ಸಿ ಸಂಖ್ಯೆ–5017/2024</u>**

**ಫಿರ್ಯಾದಿದಾರಃ–** ಸರಕಾರದ ಪರವಾಗಿ

**ಹುಣಸೂರು ಟೌನ್ ಪೊಲೀಸ್ ಠಾಣೆ .**

**– ವಿರುದ್ಧ –**

**ಆಪಾದಿತಃ–** **ರೋಶನ್ ಅಹಮ್ಮದ್** ಬಿನ್ ಜಮೀರ್ ಅಹಮ್ಮದ್,
ವಯಸ್ಸು ಸುಮಾರು 23 ವರ್ಷಗಳು,
ಆಟೋ ಚಾಲಕ,
ವಾಸಃ ಐ ಕೆ ಕಲ್ಯಾಣಮಂಟಪ, ಮುಖ್ಯರಸ್ತೆ,
ಟಿಪ್ಪು ನಗರದ ವಿ ಪಿ ಬೋರೆ ಹುಣಸೂರು ಟೌನ್,

## <u>ದೋಷಾರೋಪಣೆ</u>

ನಾನು ಟಿ.ಗೋವಿಂದಯ್ಯ., ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಹುಣಸೂರು ಪೀಠ, ಆದ ನಾನು ನಿನ್ನನ್ನು ಈ ಕೆಳಗಿನಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ,

ದಿನಾಂಕ:–15/08/2023 ರಂದು ಸಂಜೆ 18:40 ಗಂಟೆಯ ಸಮಯದಲ್ಲಿ, ಘನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ, ಹುಣಸೂರು ಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇರುವ ವಿ.ಪಿ, ಬೋರೆ (ದೇವರಾಜು ಅರಸು ನಗರ) ದ ಹತ್ತಿರವಿರುವ ಹುಣಸೂರು–ರತ್ನಪುರಿ ರಸ್ತೆಯಲ್ಲಿ, ಆರೋಪಿಯಾದ ನೀನು ಚಾಸಾ–6 ರವರ ಮಾಲೀಕತ್ವದಲ್ಲಿರುವ KA–12–7475 ರ ನಂಬರಿನ ಬಜಾಜ್ ಪ್ಯಾಸೇಂಜರ್ ಆಟೋದಲ್ಲಿ ಪಿ.ಪಿ.ಬೋರೆ ಕಡೆಯಿಂದ ಮಾರುತಿ ಬಡಾವಣೆಯ ಕಡೆಗೆ ಮಾನವ ಪ್ರಾಣಕ್ಕೆ ಅಪಾಯ ಉಂಟಾಗುವ ರೀತಿಯಲ್ಲಿ, ವೀಲಿಂಗ್ ಮಾಡಿಕೊಂಡು ಹಿಂಭಾಗದ ಬಲಭಾಗದ ಚಕ್ರವನ್ನು ಎತ್ತಿಕೊಂಡು ಅತಿವೇಗವಾಗಿ ಬರುತ್ತಿದ್ದಾಗ, ಚಾಸಾ–1 ರವರು ತಡೆಯಲು ಹೋದಾಗ ಆರೋಪಿಯಾದ ನೀನು ಪೊಲೀಸ್ ಸಮವಸ್ತ್ರದಲ್ಲಿದ ಚಾಸಾ–1 ರವರನ್ನು ಅಣಕಿಸುತ್ತ, ಡಿಕ್ಕಿಮಾಡಿ ಕೊಲೆಮಾಡುವ ಉದ್ದೇಶದಿಂದಲೇ ಆಟೋವನ್ನು ಅವರ ಮೇಲೆ ಹತ್ತಿಸಲು ಪ್ರಯತ್ನಿಸಿದಾಗ, ಚಾಸಾ–1 ರವರು ಪಕ್ಕಕ್ಕೆ ನೆಗೆದಾಗ, ಆಟೋವು ಹೋಗಿ ಇಲಾಖಾ ಜೀಪ್ ನಂಬರ್

**ಎಸ್ ಸಿ ಸಂಖ್ಯೆ–5017/2024**

KA–55–G–0188 ನಂಬರಿನ MAHENDRA BOLERO ಜೀಪಿನ ಮುಂಭಾಗದಲ್ಲಿ ಎಡಭಾಗಕ್ಕೆ ಢಿಕ್ಕಿ ಮಾಡಿದ್ದು, ಎಡಭಾಗದ ಹೆಡ್ ಲೈಟ್ ಬಿಡಿಂಗ್, ಹಾಗೂ ಎಡಭಾಗದ ಪೆಂಡರ್, ಹಾಗೂ ಎಡಭಾಗದ ಮಡ್ ಗಾರ್ಡ್ ಸಾಮಾನ್ಯ ಡೆಂಟ್ ಹಾಗೂ ಜಖಂ ಆಗಿದ್ದು, ಸುಮಾರು 3000/–ರೂಗಳನ್ನು ನಷ್ಟ ಉಂಟುಮಾಡಿರುವುದು ತನಿಖೆಯಿಂದ ದೃಢಪಟ್ಟ ಮೇರೆಗೆ ಸದರಿ ಆರೋಪಿಯಾದ ನೀನು ಚಾಸಾ–1 ರವರ ಕಾನೂನು ಬದ್ಧ ಕರ್ತವ್ಯಕ್ಕೆ ಅಡ್ಡಿಪಡಿಸಿ, ಅವರನ್ನು ಕೊಲೆಮಾಡುವ ಉದ್ದೇಶದಿಂದ ಆಟೋವನ್ನು ಚಾಸಾ–1 ರವರ ಮೇಲೆ ಹತ್ತಿಸಲು ಪ್ರಯತ್ನಿಸಿ, ಇಲಾಖಾ ಜೀಪಿಗೆ ಡಿಕ್ಕಿ ಮಾಡಿ 3000/– ರೂ ನಷ್ಟವನ್ನು ಉಂಟುಮಾಡಿರುವುದು ಭಾರತೀಯ ದಂಡ ಸಂಹಿತೆ ಕಲಂ 353, 307, 427 ರಡಿ ಅಪರಾಧವೆಸಗಿರುತ್ತೀಯಾ.

ಈ ಮೇಲಿನ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ಈ ಕುರಿತು ನಿನ್ನನ್ನು ಅಧಿವಿಚಾರಣೆಗೆ ಒಳಪಡಿಸಲು ಆದೇಶಿಸುತ್ತಿದ್ದೇನೆ.

**(ಟಿ.ಗೋವಿಂದಯ್ಯ)**
ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.

**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**ಎಸ್ ಸಿ ಸಂಖ್ಯೆ–5017/2024**

**ಫಿರ್ಯಾದಿದಾರಃ–** ಸರಕಾರದ ಪರವಾಗಿ

**ಹುಣಸೂರು ಟೌನ್ ಪೊಲೀಸ್ ಠಾಣೆ .**

**– ವಿರುದ್ಧ –**

**ಆಪಾದಿತಃ–** **ರೋಶನ್ ಅಹಮ್ಮದ್** ಬಿನ್ ಜಮೀರ್ ಅಹಮ್ಮದ್

**ಆಪಾದನೆ**

1) **ಪ್ರಶ್ನೆಃ–** ಈಗ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೆ ?

**ಉತ್ತರಃ–**

2) **ಪ್ರಶ್ನೆಃ–**ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೆ ?

**ಉತ್ತರಃ–**

(ಆಪಾದಿತನಿಗೆ ಹೇಳಿಕೆಯನ್ನು ಅವನಿಗೆ ತಿಳಿದ ಭಾಷೆಯಲ್ಲಿ ವಿವರಿಸಿ ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)

**(ಟಿ.ಗೋವಿಂದಯ್ಯ)**
8 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.